ಒ ಎಸ್ ನಂ. 10/2019
ಪಿಡಬ್ಲ್ಯು -2

ಸಾಕ್ಷಿಗೆ ದಿನಾಂಕ: 20-10-2022 ರಂದು ಪ್ರಮಾಣ ವಚನ ಬೋದಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಜೆ ಹೆಚ್ ವಕೀಲರಿಂದ</u>

ವಾದಿಯು ನನ್ನ ಗಂಡ. ಪ್ರಸ್ತುತ ಅವರು ಬೆಂಗಳೂರಿನ ಕಂಪನಿ ಒಂದರಲ್ಲಿ ಕೆಲಸವನ್ನು ಮಾಡಿತ್ತಿದ್ದಾರೆ. ನಾನು ಈ ದಾವೆಯಲ್ಲಿ, ಪ್ರತಿವಾದಿಯ ದಾವಾಸ್ತಿಯಲ್ಲಿರುವ ಮನೆಯು ಫೌಂಡೇಷನ್ ಹಂತದಲ್ಲಿ ಇದ್ದು ಅಕ್ರಮ ಪ್ರವೇಶ ಮಾಡಬಾರದೆಂದು ನಿವೃತ್ತಿಯನ್ನು ಕೋರಿರುತ್ತೇನೆ. ದಾವಾಸ್ತಿಯಲ್ಲಿ ಇರುವ ಮನೆಯ ಫೌಂಡೇಷನ್ ಹಂತದಲ್ಲಿ ಪ್ರತಿವಾದಿಯು ಯಾವ ದಿನಾಂಕ ಹಾಗೂ ಯಾವ ವರ್ಷದಲ್ಲಿ ಅಕ್ರಮ ಪ್ರವೇಶ ಮಾಡಿದ್ದಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಪ್ರತಿವಾದಿಯು ದಾವಾಸ್ತಿಗೆ ಅಕ್ರಮ ಪ್ರವೇಶ ಮಾಡುವ ಸಂದರ್ಭದಲ್ಲಿ ನಾವು ಪೊಲೀಸರಿಗೆ ದೂರನ್ನು ನೀಡಿರುತ್ತೇವೆ. ಸದ್ರಿ ಪೊಲೀಸ್ ದೂರನ್ನು ನಾನು ಯಾವ ದಿನಾಂಕದಂದು ಕೊಟ್ಟಿರುತ್ತೇನೆ ಎಂದು ಕುರಿತಾಗಿ ಹೇಳಲು ಬರುವುದಿಲ್ಲ. ದಾವಾಸ್ತಿಯಲ್ಲಿ ಇರುವ ಮನೆಯನ್ನು ನಾನು ಬಸವ ಯೋಜನೆ ಅಡಿಯಲ್ಲಿ ಕಟ್ಟಿರುತ್ತೇವೆ. ಬಸವ ಯೋಜನೆ ಅಡಿಯಲ್ಲಿ ಮನೆಯನ್ನು ಕಟ್ಟಬೇಕಾದರೆ ನಿಗಧಿತ ಅವಧಿಯೊಳಗಾಗಿ ಮನೆಯನ್ನು ಕಟ್ಟಬೇಕಾಗುತ್ತದೆ ಎಂದರೆ ಸರಿ. ನಿಪಿ-3 ಅನ್ನು ಸರ್ಕಾರವು ನನಗೆ ಯಾವ ವರ್ಷದಂದು ನೀಡಿರುತ್ತದೆ ಎಂದು ನಿಪಿ-3 ರಲ್ಲಿ ನಮೂದಾಗಿರುವುದಿಲ್ಲ. ಆದರೆ ಸಾಕ್ಷಿಯು ಮುಂದುವರಿದು 2018 ರಲ್ಲಿ ಸರ್ಕಾರದಿಂದ ನನಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. 2018 ರಲ್ಲಿ ನಿಪಿ-3 ಅನ್ನು ಸರ್ಕಾರದಿಂದ ನಾನು ಪಡೆಯಲ್ಲೇ ಇಲ್ಲ ಎಂದರೆ ಸರಿಯಲ್ಲ. ನಿಪಿ-3 ರಂತೆ ನನಗೆ ಯಾವುದೇ ಮನೆ ಮಂಜೂರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ಅನ್ನು ನಾನು ದಾವೆಯನ್ನು ಹೂಡಬೇಕಾಗಿ ಸೃಷ್ಟೀಕರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಇರುವ ಮನೆಯನ್ನು ಕಟ್ಟುವ ಮೊದಲು ಆ ಬಗ್ಗೆ ನಾನು ಭೂ ಪರಿವರ್ತನೆಯನ್ನು ಮಾಡಿರುವುದಿಲ್ಲ. ನಿಪಿ-3 ಅನ್ನು ಹರಿಹರ ಪಂಚಾಯಿತಿಯಿಂದ ನಾನು ಖುದ್ದಾಗಿ ಪಡೆದುಕೊಂಡಿರುತ್ತೇನೆ. ನಿಪಿ-3 ಅನ್ನು ಪಡೆದುಕೊಳ್ಳುವ ಮೊದಲು ನಾನು ಮನೆ ಕಟ್ಟುವ ಜಮೀನನ್ನು ಸರ್ಕಾರಕ್ಕೆ ಆಧಾರವಾಗಿ ಕೊಟ್ಟಿರುತ್ತೇನೆ. ಯಾವ ಸರ್ವೆ ನಂಬ್ರ ಜಾಗದ ಆಸ್ತಿಯನ್ನು

ಒ ಎಸ್ ನಂ. 10/2019
ಪಿಡಬ್ಲ್ಯು -2

ನಾನು ಸರ್ಕಾರಕ್ಕೆ ಆಧಾರವಾಗಿ ನೀಡಿರುತ್ತೇನೆ ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವಾಸ್ತಿಯ ಒಟ್ಟು ವಿಸ್ತೀರ್ಣ 11 ಸೆಂಟ್ಸ್ ಇದ್ದು, ಅದು ಒಂದಕ್ಕೊಂದು ಲಗತ್ತಾಗಿರುತ್ತದೆ. ದಾವಾಸ್ತಿಯಲ್ಲಿ ಇರುವ ಮನೆಯನ್ನು ಕಟ್ಟಲು ನಾನು ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ. ದಾವಾಸ್ತಿಯಲ್ಲಿ ಇರುವ ಮನೆಯನ್ನು ಕಟ್ಟುವ ಮೊದಲು ಹಾಗೂ ನಂತರ ಹರಿಹರ ಪಂಚಾಯಿತಿಯವರು ಸ್ಥಳಕ್ಕೆ ಬಂದು ಜಿಪಿಎಸ್ ಮಾಡಿರುತ್ತಾರೆ. ದಾವಾಸ್ತಿಯಲ್ಲಿ ಇರುವ ಮನೆಗೆ 9/11 ಫಾರಂ ಅನ್ನು ಮಾಡಿರುವುದಿಲ್ಲ. ದಾವಾಸ್ತಿಯಲ್ಲಿ ಇರುವ ಎಲ್ಲಾ ವ್ಯವಹರಣೆಗಳ ಬಗ್ಗೆ ಹೆಚ್ಚಾಗಿ ನನ್ನ ಗಂಡ ನೋಡಿಕೊಳ್ಳುತ್ತಿದ್ದರು. ಈ ದಾವೆಯನ್ನು ದಾಖಲಿಸಲು ನನ್ನ ಗಂಡ ಮಾಹಿತಿ ನೀಡಿರುತ್ತಾರೆ. ನಿಪಿ-3 ಕ್ಕೆ ನನ್ನ ಹೆಸರಿನಲ್ಲಿ ನಾನು ಅರ್ಜಿಯನ್ನು ನೀಡಿರುತ್ತೇನೆ. ನಿಪಿ-3 ಆಗುವ ಸಂದರ್ಭದಲ್ಲಿ ಮನೆ ಕಟ್ಟುವ ಜಾಗವು ನನ್ನ ಭಾವ ರಾಮಕೃಷ್ಣ ರವರ ಹೆಸರಿನಲ್ಲಿ ಇತ್ತು. ದಾವಾಸ್ತಿಯಲ್ಲಿ ಒಟ್ಟು 2 ಸರ್ವೆ ನಂಬ್ರ ಇದ್ದು, ಆ 2 ಸರ್ವೆ ನಂಬ್ರಗಳ ಮಧ್ಯೆ ಮನೆಯ ಪಂಚಾಂಗ ಬರುತ್ತದೆ ಎಂದರೆ ಸರಿ. ದಾವಾಸ್ತಿಯ ಪೂರ್ವದಲ್ಲಿ ಕೃಷ್ಣಕುಮಾರ್ ರವರ ಕಲ್ಲಿನ ಕಾಂಪೌಂಡ್ ಇರುತ್ತದೆ. ಪಶ್ಚಿಮಕ್ಕೆ ನನಗೆ ಹಾಗೂ ಪ್ರತಿವಾದಿಗೆ ಸೇರಿದಂತಹ ತೋಟ ಇರುತ್ತದೆ. ದಕ್ಷಿಣಕ್ಕೆ ನನ್ನ ಕಾಂಪೌಂಡ್ ಇದ್ದು, ಉತ್ತರಕ್ಕೆ ಕೃಷ್ಣಕುಮಾರ್ ರವರ ಕಲ್ಲಿನ ಕಟ್ಟಣೆ ಇರುತ್ತದೆ. ನನ್ನ ಮನೆಯ ಪಂಚಾಂಗದ ದಕ್ಷಿಣ ಭಾಗದ ಬದಿಯಿಂದ ನನಗೆ ಸೇರಿದಂತಹ ಕಾಂಪೌಂಡಿಗೆ ಅಂತರ ಸುಮಾರು 15 ಅಡಿ ಇರುತ್ತದೆ. ಮನೆಯನ್ನು ಕಟ್ಟುವ ಸಲುವಾಗಿ ಬಸವ ಯೋಜನೆ ಅಡಿಯಲ್ಲಿ ಪಂಚಾಂಗದ ಒಂದು ಕಂತು ಕಳೆದ ಡಿಸೆಂಬರ್ 2021 ರಲ್ಲಿ ನಾನು ಪಡೆದುಕೊಂಡಿರುತ್ತೇನೆ. ಪಂಚಾಂಗದ ಒಂದು ಕಂತು ಬಸವ ಯೋಜನೆಯ ಅಡಿಯಲ್ಲಿ ಸರ್ಕಾರದಿಂದ ನನಗೆ ಪಾವತಿ ಆದ ನಂತರ ಎಷ್ಟು ಸಮಯದ ಒಳಗೆ ಗೋಡೆಯ ಕಾಮಗಾರಿಯನ್ನು ಮಾಡಬೇಕು ಎಂದು ಸಮಯವನ್ನು ನಿರ್ಧರಿಸಿರುವುದಿಲ್ಲ. ಪ್ರತಿವಾದಿಯು ಹರಿಹರ ಪಂಚಾಯಿತಿಯಲ್ಲಿ ನನ್ನ ಜಾಗದಲ್ಲಿ ವಾದಿಯು ಮನೆಯನ್ನು ಕಟ್ಟಿರುವುದರಿಂದ ಬಿಲ್ಲನ್ನು ಕೊಡಬಾರದು ಎಂದು ಹರಿಹರ ಪಂಚಾಯಿತಿಯಲ್ಲಿ ದೂರನ್ನು ನೀಡಿರುತ್ತಾರೆ. ನಿಪಿ-4 ರಂತೆ ಪ್ರತಿವಾದಿಯು ಮನೆಯನ್ನು ಕಟ್ಟಬಾರದು ಎಂದು ದಾವೆಯನ್ನು ನನ್ನ ವಿರುದ್ಧವಾಗಿ ಹೂಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ನಾನು ಮನೆ ಅಡಿ ಜಾಗವನ್ನು ಅಳತೆ

ಒ ಎಸ್ ನಂ. 10/2019
ಪಿಡಬ್ಲ್ಯು -2

ಮಾಡಿರುತ್ತೇನೆ. ಆ ಕುರಿತು ದಾಖಲೆ ನನ್ನ ಬಳಿ ಇರುತ್ತದೆ. ಆಗ ಬಗ್ಗೆ ನಾನು ನನ್ನ ಗಂಡನಲ್ಲಿ ಕೇಳಿ ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ವಾದಿ ಹಾಗೂ ಪ್ರತಿವಾದಿಯ ಜಾಗನಮ್ನು ಅಳತೆ ಮಾಡಿದ ನಂತರ ಒಂದು ವೇಳೆ ನಾನು ಹಾಕಿರು ಮನೆಯ ಪಂಚಾಂಗವು ಪ್ರತಿವಾದಿಯ ಜಮೀನಿನಲ್ಲಿ ಬಂದಲ್ಲಿ ನಾನು ತೆರವುಗೊಳಿಸಲು ಬದ್ಧಳಾಗಿರುತ್ತೇನೆ. ಅದರಂತೆ ಅರ್ಜಿಯನ್ನು ಹಾಕಲು ನನ್ನ ಆಕ್ಷೇಪಣೆ ಇರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ತೆ.ನ್ಯಾಸಾ.ಹೇ. ನನ್ನ ಉ.ಬೆ. ಮಾಡಲಾಯಿತು.

ಓ.ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ

ಸಿವಿಲ್ ನ್ಯಾಯಾಧೀಶರು, ಸುಳ್ಯ.